ವರ್ತುಲ ರಸ್ತೆ ನಿರ್ಮಾಣ

259 (216) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) :– ಮಾನ್ಯ ಲೋಕೋಪಯೋಗಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಸವನಬಾಗೇವಾಡಿ ಪಟ್ಟಣಕ್ಕೆ ವರ್ತುಲ ರಸ್ತೆಯ ನಿರ್ಮಾಣ ಮಾಡುವುದಕ್ಕೆ ಸರ್ಕಾರದಿಂದ ಕೈಗೊಂಡ ಕ್ರಮಗಳೇನು ?

ಶ್ರೀ ಸಿ. ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು):–

ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ಪಟ್ಟಣಕ್ಕೆ ವರ್ತುಲ ರಸ್ತೆ ನಿರ್ಮಾಣಕ್ಕೆ ರೂ. 23.00 ಕೋಟಿಗಳ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಹನಿ ನೀರಾವರಿ ಯೋಜನೆಗೆ ಹಣ ಪಾವತಿ

261 (542) ಶ್ರೀ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) :– ಮಾನ್ಯ ಕೃಷಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2010–11ನೇ ಮತ್ತು ಪ್ರಸ್ತುತ ಹಣಕಾಸಿನ ವರ್ಷದಲ್ಲಿ ರಾಜ್ಯದಲ್ಲಿ ಹನಿ ನೀರಾವರಿಗೆ ನಿಗಧಿಯಾದ ಅನುದಾನವೆಷ್ಟು ; ಖರ್ಚಾದ ಹಣವೆಷ್ಟು ;

(ಆ) ಬಿಜಾಪುರ ಜಿಲ್ಲೆಯಲ್ಲಿ ಹನಿ ನೀರಾವರಿ ಕಾಮಗಾರಿಗಳ ಬಿಲ್ಲು ಜಿಲ್ಲಾ ಅಧಿಕಾರಿಗಳು ಮುಂದೆ ಹಣ ಪಾವತಿಗಾಗಿ ಸಲ್ಲಿಸಲ್ಪಟ್ಟಿದ್ದರೂ ಅವರು ಹಣ ಪಾವತಿಯಲ್ಲಿ ವಿಳಂಬ ಏಕೆ ಮಾಡುತ್ತಿದ್ದಾರೆ;

(ಇ) ಈ ಅಧಿಕಾರಿಯ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):–

2010–11ನೇ ಸಾಲಿನಲ್ಲಿ ಹನಿ ನೀರಾವರಿ ಘಟಕಕ್ಕೆ ರೂ. 14.53 ಕೋಟಿ ಅನುದಾನ ನಿಗಧಿ ಮಾಡಲಾಗಿದ್ದು, ಹನಿ ನೀರಾವರಿಗಾಗಿ ರೂ. 10.098 ಕೋಟಿ ವೆಚ್ಚ ಮಾಡಲಾಗಿರುತ್ತದೆ.

2011–12ನೇ ಸಾಲಿಗೆ ಹನಿ ನೀರಾವರಿ ಘಟಕಕ್ಕೆ ರೂ. 11.40 ಕೋಟಿ ಕಾರ್ಯಕ್ರಮ ರೂಪಿಸಲಾಗಿದ್ದು. ಪ್ರಸಕ್ತ ಸಾಲಿನಲ್ಲಿ ರೂ. 11.86 ಕೋಟಿ ಅನುದಾನ ಬಿಡುಗಡೆಯಾಗಿದೆ.

ಹನಿ ನೀರಾವರಿ ಅಳವಡಿಕೆಯ ಕುರಿತು ಇಂಡಿ. ಸಿಂದಗಿ, ಮುದ್ದೇಬಿಹಾಳ, ಬ.ಬಾಗೇವಾಡಿ ತಾಲುಕಿನಿಂದ ಮೇಲು ರುಜುವಿಗಾಗಿ ಈ ವರ್ಷದಲ್ಲಿ ಯಾವುದೇ ಬಿಲ್ಲುಗಳು